ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು,
ನೃಪತುಂಗ ರಸ್ತೆ, ಕೆ. ಆರ್. ವೃತ್ತ, ಬೆಂಗಳೂರು-560 001

ಸಿ1(7) ಕಾ.ಮಿ.ಬ-148/2009-10 (ಭಾಗ-4) ದಿನಾಂಕ:- 05-08-2011

**-: ಅಧಿಕೃತ ಜ್ಞಾಪನ :-**

ವಿಷಯ:- ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಬಿ, ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳಿಗೆ 10 ವರ್ಷಗಳ ಕಾಲಮಿತಿ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ

ಉಲ್ಲೇಖ:-1) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್4 ಎಸ್‌ಡಿಇ 2005 ದಿ: 04-04-05
2) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 88 ಎಸ್‌ಆರ್‌ಪಿ(ಸಿಎಸ್‌ಸಿ) 81 ದಿ::27-03-82
3) ಸರ್ಕಾರದ ಆದೇಶ ಸಂಖ್ಯೆ: ಇ ಡಿ 250 ಡಿ ಪಿ ಐ 2006, ದಿನಾಂಕ: 22-02-2008
4) ಸರ್ಕಾರದ ಆದೇಶ ಸಂಖ್ಯೆ: ಇ ಡಿ 464 ಡಿ ಪಿ ಐ 2008, ದಿನಾಂಕ: 06-01-2009
5) ದಿನಾಂಕ:-29-07-2010ರಂದು ಜರುಗಿದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು

*****

<u>ಪ್ರಸ್ತಾವನೆ:</u>

ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಬಿ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳಿಗೆ 10 ವರ್ಷ ಗಳ ಸ್ವಯಂಚಾಲಿತ ವೇತನ ಬಡ್ತಿ ಮಂಜೂರಾತಿಯನ್ನು ಇದುವರೆಗೆ ಗ್ರೂಪ್-ಬಿ ಅಧಿಕಾರಿಗಳ ನೇಮಕಾತಿ ಪ್ರಾಧಿಕಾರವಾಗಿದ್ದ ಸರ್ಕಾರದಿಂದ ಆದೇಶ ಹೊರಡಿಸಲಾಗುತ್ತಿತ್ತು.

ಉಲ್ಲೇಖ: (1) ರ ಸರ್ಕಾರದ ಅಧಿಸೂಚನೆ ಪ್ರಕಾರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರನ್ನು ಪ್ರೌಢಶಾಲಾ ಮುಖ್ಯ ಶಿಕ್ಷಕರು ವೃಂದದ (ಗ್ರೂಪ್-ಬಿ) ಅಧಿಕಾರಿಗಳ ನೇಮಕಾತಿ ಪ್ರಾಧಿಕಾರ ಎಂದು ನೇಮಿಸಿ ಸರ್ಕಾರವು ಆದೇಶ ಹೊರಡಿಸಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 547 ಡಿ ಪಿ ಐ 94 ದಿನಾಂಕ: 03-04-1999 ರಲ್ಲಿ ಪ್ರೊಬೇಷನರಿ ಮುಖ್ಯ ಶಿಕ್ಷಕರಾಗಿ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಆಯ್ಕೆಹೊಂದಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಗ್ರೂಪ್-ಬಿ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಹಾಗು ಮುಖ್ಯಶಿಕ್ಷಕರ ವೃಂದದಲ್ಲಿ 10 ವರ್ಷಗಳ ನಿರಂತರ ಸೇವೆಯನ್ನು ಒಂದೇ ಹುದ್ದೆಯಲ್ಲಿ ಸಲ್ಲಿಸಿರುವ ಅಧಿಕಾರಿಗಳ ಕಾಲಮಿತಿ ವೇತನ ಬಡ್ತಿ ಮಂಜೂರಾಗಬೇಕಿದೆ.

ಅಂತಹ ಅರ್ಹ ಅಧಿಕಾರಿಗಳು ಅವರ ಮೇಲಾಧಿಕಾರಿಗಳ ಮೂಲಕ ಅಗತ್ಯ ದಾಖಲೆ ಮತ್ತು ಮಾಹಿತಿಗಳನ್ನು ಈ ಕಛೇರಿಗೆ ಸಲ್ಲಿಸಿರುವುದನ್ನು ದಿನಾಂಕ:-29-07-2011 ರಂದು ಜರುಗಿದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ಮುಂದೆ ಮಂಡಿಸಿ ಕೂಲಂಕಶವಾಗಿ ಪರಿಶೀಲಿಸಲಾಯಿತು.

ಕಾಲಮಿತಿ ವೇತನ ಬಡ್ತಿಯನ್ನು ಮಂಜೂರು ಮಾಡಲು ಅಗತ್ಯ ದಾಖಲೆಗಳಾದ ಖಾಯಂ ಪೂರ್ವ ಸೇವಾ ಅವಧಿ ಘೋಷಣೆ ಆದೇಶಗಳು, 05 ವರ್ಷದ ಕಾರ್ಯ ನಿರ್ವಹಣಾ ವರದಿಗಳು/ ವಿಶೇಷ ವರದಿಗಳು, ಶಿಸ್ತು ಕ್ರಮ ಇಲ್ಲದಿರುವ ಬಗ್ಗೆ ವರದಿ ಹಾಗೂ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ದಾಖಲೆಗಳನ್ನು ಪರಿಶೀಲಿಸಿ ಎಲ್ಲಾ ದಾಖಲೆಗಳು ಸಮರ್ಪಕವಾಗಿದ್ದು ಕಾಲಮಿತಿ ವೇತನ ಬಡ್ತಿಗೆ ಅರ್ಹರಿರುವುದರಿಂದ ಹಾಲಿ ಇರುವ ವೇತನ ಶ್ರೇಣಿ ರೂ:-11400-21600 ರಿಂದ 10 ವರ್ಷಗಳ ಕಾಲಮಿತಿ ವೇತನ ಬಡ್ತಿ ಶ್ರೇಣಿ ರೂ:-12000-22650 ರಲ್ಲಿ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಆದೇಶ:**

ಉಲ್ಲೇಖಿತ ಸರ್ಕಾರದ ಆದೇಶಗಳನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕ ವೃಂದಕ್ಕೆ ಸೇರಿದ ಗ್ರೂಪ್-ಬಿ ಹುದ್ದೆಯಲ್ಲಿ ಯಾವುದೇ ಬಡ್ತಿ ಇಲ್ಲದೆ ನಿರಂತರವಾಗಿ 10 ವರ್ಷಗಳ ಸೇವೆಯನ್ನು ಪೂರೈಸಿರುವುದರಿಂದ ಅನುಬಂಧದಲ್ಲಿ ಸೂಚಿಸಿದ 27 ಜನ ಅಧಿಕಾರಿಗಳಿಗೆ ಅವರ ಹೆಸರಿನ ಮುಂದೆ ಸೂಚಿಸಿರುವ ದಿನಾಂಕ ಮತ್ತು ವೇತನ ಶ್ರೇಣಿಯಲ್ಲಿ 10 ವರ್ಷಗಳ ಕಾಲಮಿತಿ ವೇತನ ಬಡ್ತಿಯನ್ನು ಮಂಜೂರು ಮಾಡಿದೆ.

**(ಮಾನ್ಯ ಆಯುಕ್ತರಿಂದ ಕರಡು ಅನುಮೋದಿಸಲ್ಪಟ್ಟಿದೆ)**

(ಎನ್.ಬಿ ಪಾಟೀಲ್)
ಜಂಟಿ ನಿರ್ದೇಶಕರು (ಆಡಳಿತ)

ಇವರಿಗೆ:-

1. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಅವಗಾಹನೆಗಾಗಿ ಸಲ್ಲಿಸಿದೆ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ/ಅಪರ ಆಯುಕ್ತರು, ಧಾರವಾಡ ಇವರಿಗೆ ಮಾಹಿತಿಗಾಗಿ
3. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
4. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರುಗಳಿಗೆ ಮಾಹಿತಿಗಾಗಿ
5. ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಮಾಹಿತಿಗಾಗಿ
6. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗೀಯ ಸಹ ನಿರ್ದೇಶಕರುಗಳಿಗೆ / ಸಿ.ಟಿ.ಇ. ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ
7. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಉಪ ನಿರ್ದೇಶಕರುಗಳಿಗೆ ಮಾಹಿತಿಗಾಗಿ
8. ಸಂಬಂಧಿಸಿದ ಅಧಿಕಾರಿಗಳಿಗೆ
9. ಕಛೇರಿ ಪ್ರತಿ

# ಅನುಬಂಧ

## ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ

## ಸಿ1(7) ಕಾ.ಮಿ.ಬ-148/2009-10(ಭಾಗ-4) ದಿನಾಂಕ:- 05-08-2011 ಕ್ಕೆ ಅನುಬಂಧ

| ಕ್ರ.ಸಂ | ಅಧಿಕಾರಿಗಳ ಹೆಸರು, ಪದನಾಮ ಹಾಗೂ ಸೇವೆ ಸಲ್ಲಿಸುತ್ತಿರುವ ಕಛೇರಿ ವಿಳಾಸ | ಗ್ರೂಪ್-ಬಿ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕ | 10 ವರ್ಷಗಳ ಕಾಲಮಿತಿ ವೇತನ ಬಡ್ತಿ ಮಂಜೂರು ಮಾಡಿದ ದಿನಾಂಕ | ಹಾಲಿ ಪಡೆಯುತ್ತಿರುವ ವೇತನ ಶ್ರೇಣಿ | 10 ವರ್ಷಗಳ ಕಾಲಮಿತಿ ವೇತನ ಬಡ್ತಿಯಲ್ಲಿ ನಿಗಧಿ ಪಡಿಸಿದ ವೇತನ ಶ್ರೇಣಿ |
|---|---|---|---|---|---|
| 01 | ಚಂದ್ರೇಗೌಡ. ಡಿ. ಹೆಚ್, ಉಪನ್ಯಾಸಕರು, ಡಯಟ್, ಹಾಸನ | 04-05-1999 | 04-05-2009 | 11400-21600 | 12000-22650 |
| 02 | ಮಹಮದ್ ಉಸ್ಮಾನ್ ಕೆ. ಅದೀಕ್ಷಕರು, ಡಯಟ್ ಚಿತ್ರದುರ್ಗ | 10-05-1999 | 10-05-2009 | 11400-21600 | 12000-22650 |
| 03 | ಶೀಲರಾಣಿ, ಎಂ. ಉಪನ್ಯಾಸಕರು, ಡಯಟ್, ಬೆಂಗಳೂರು ಗ್ರಾಮಾಮತರ ಜಿಲ್ಲೆ ಬೆ-10 | 18-11-1999 | 18-11-2009 | 11400-21600 | 12000-22650 |
| 04 | ಚಂದ್ರಮೌಳಿ ಬಿ. ಎಂ, ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ, ಕಡೂರು ತಾಲ್ಲೂಕು ಚಿಕ್ಕಮಗಳೂರು | 30-04-1999 | 30-04-2009 | 11400-21600 | 12000-22650 |
| 05 | ಹೆಚ್.ಶ್ರೀನಿವಾಸ, ಪ್ರಾಚರ್ಯರು, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮೊರಘಟ್ಟ, ಚಿತ್ರದುರ್ಗ | 04-05-1999 | 04-05-2009 | 11400-21600 | 12000-22650 |
| 06 | ಅನುರಾಧ. ಎಂ. ಆರ್, ಅದೀಕ್ಷಕರು, ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ ಮೈಸೂರು | 29-04-1999 | 29-04-2009 | 11400-21600 | 12000-22650 |
| 07 | ಪದ್ಮಶ್ರೀ ಆರ್. ಪಿ, ಸಹಾಯಕ ಕಾರ್ಯಕ್ರಮ ಅಧಿಕಾರಿ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಎಸ್ ಎಸ್ ಎ, ನೃಪತುಂಗ ರಸ್ತೆ ಬೆಂಗಳೂರು | 29-04-1999 | 29-04-2009 | 11400-21600 | 12000-22650 |
| 08 | ಪ್ರೇಮಲತ ಎ, ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು | 29-04-1999 | 29-04-2009 | 11400-21600 | 12000-22650 |
| 09 | ಗೋವಿಂದಪ್ಪ ಟಿ, ಮುಖ್ಯಶಿಕ್ಷಕರು ಸರ್ಕಾರಿ ಪ್ರೌಢಶಾಲೆ ದುರ್ವಿಕೆರೆ, ಚನ್ನಗಿರಿ ತಾಲ್ಲೋಕು, ದಾವಣಗೆರೆ | 05-05-1999 | 05-05-2009 | 11400-21600 | 12000-22650 |
| 10 | ರಮೇಶ್ ಬಿ. ಆರ್, ಮುಖ್ಯ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ತಳ್ಳಿಹಳ್ಳ, ಜಕ್ಕನಹಳ್ಳಿ ಅಂಚೆ ಚಿಕ್ಕಮಗಳೂರು ತಾ ಮತ್ತು ಜಿಲ್ಲೆ | 17-11-1999 | 17-11-2009 | 11400-21600 | 12000-22650 |
| 11 | ಶಿವಲಿಂಗಯ್ಯ ಎ.ಟಿ, ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ, ಮಳವಳ್ಳಿ ತಾ ಮಂಡ್ಯ ಜಿಲ್ಲೆ | 03-05-1999 | 03-05-2009 | 11400-21600 | 12000-22650 |
| 12 | ಶಿವರಾಮು ಕೆ. ಬಿ, ಉಪನ್ಯಾಸಕರು, ಡಯಟ್, ಕೊಡಗು | 17-11-1999 | 17-11-2009 | 11400-21600 | 12000-22650 |
| 13 | ರವಿ ಡಿ. ಹೆಚ್, ಮುಖ್ಯ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ಬೇತೂರುಪಾಳ್ಯ, ಹಿರಿಯೂರು ತಾ ಚಿತ್ರದುರ್ಗ ಜಿಲ್ಲೆ | 19-11-1999 | 19-11-2009 | 11400-21600 | 12000-22650 |

| | | | | | |
|---|---|---|---|---|---|
| 14 | ರವಿ ಎಲ್, ಉಪನ್ಯಾಸಕರು ಡಯಟ್ ದಾವಣಗೆರೆ | 03-05-1999 | 03-05-2009 | 11400-21600 | 12000-22650 |
| 15 | ಅನಿತಾ ಬಿ, ಎನ್, ಕ್ಷೇತ್ರ ಸಮನ್ವಯಾಧಿಕಾರಿಗಳು, ಕ್ಷೇತ್ರ ಸಂಪನ್ಮೂಲ ಘಟಕ, ಸರ್ವ ಶಿಕ್ಷಣ ಅಭಿಯಾನ ಹರಿಹರ ತಾ, ದಾವಣಗೆರೆ ಜಿಲ್ಲೆ | 30-04-1999 | 30-04-2009 | 11400-21600 | 12000-22650 |
| 16 | ರಾಜು ಜಿ, ಎನ್, ಮುಖ್ಯ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಸ್ವಾಂದೇನಹಳ್ಳಿ, ತುಮಕೂರು ತಾ | 19-11-1999 | 19-11-2009 | 11400-21600 | 12000-22650 |
| 17 | ಪ್ರದೀಪ್ ಕುಮಾರ್ ಸಿ ಎನ್, ಉಪನ್ಯಾಸಕರು, ಡಯಟ್, ಕೋಲಾರ | 19-11-1999 | 19-11-2009 | 11400-21600 | 12000-22650 |
| 18 | ಉಮಾದೇವಿ ಎನ್, ಉಪನ್ಯಾಸಕರು, ಡಯಟ್, ಬೆಂಗಳೂರು ಗ್ರಾಮಾಂತರ | 18-11-1999 | 18-11-2009 | 11400-21600 | 12000-22650 |
| 19 | ಶ್ರೀಮತಿ ವಸಂತಕುಮಾರಿ, ಉಪಪ್ರಾಂಶುಪಾಲರು. ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು. ಮೈಸೂರು | 18-11-1999 | 18-11-2009 | 11400-21600 | 12000-22650 |
| 20 | ಶ್ರೀಮತಿ ರಿಜ್ವಾನ ಕೌಸರ್, ಮುಖ್ಯ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ. ನಿಜಾಮಿಯಾ ಲಷ್ಕರ ಮೊಹಲ್ಲಾ. ಮೈಸೂರು | 30-04-1999 | 30-04-2009 | 11400-21600 | 12000-22650 |
| 21 | ಶ್ರೀ ಪಿ ಮಹದೇವಯ್ಯ, ಮುಖ್ಯ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ. ಗಾಗೇನಹಳ್ಳಿ. ಹುಣಸೂರು ತಾ. ಮೈಸೂರು ಜಿಲ್ಲೆ | 19-11-1999 | 19-11-2009 | 11400-21600 | 12000-22650 |
| 22 | ಎನ್ ಕೆ ಲಕ್ಷ್ಮಮ್ಮ, ಉಪನ್ಯಾಸಕರು, ಡಯಟ್, ಚಿಕ್ಕಬಳ್ಳಾಪುರ | 17-11-1999 | 17-11-1999 | 11400-21600 | 12000-22650 |
| 23 | ಸೋಮ ಶೇಖರಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿಗಳು ದಕ್ಷಿಣ ವಲಯ ಮಂಡ್ಯ | 13-01-1994 | 13-01-2004 | 6000-11200 | 6300-11840 |
| 24 | ಶ್ರೀ ಸಿ. ನಾಗರಾಜ. ಮುಖ್ಯ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ. ನಾಗರಸಹಳ್ಳಿ. ದಾವಣಗೆರೆ. ದಕ್ಷಿಣ ವಲಯ | 04-05-1999 | 04-05-2009 | 11400-21600 | 12000-22650 |
| 25 | ಶಂಕರಪ್ಪ, ನಿವೃತ್ತ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ. ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆ | 29-12-1978 | 29-12-1988 | 1900-3650 | 2050-3950 |
| 26 | ಎಂ. ಚಂದ್ರಪ್ಪ, ನಿವೃತ್ತ ಸ್ಥಾನಪನ್ನ ಮುಖ್ಯಶಿಕ್ಷಕರು, ಬೆಳ್ಳಿಗನೂರು, ಕಡೂರು ತಾ, ಚಿಕ್ಕಮಗಳೂರು | 24-09-1999 | 24-09-2009 | 11400-21600 | 12000-22650 |
| 27 | ಶ್ರೀಮತಿ ಕೆ ಪದ್ಮಮ್ಮ, ಸ್ಥಾನಪನ್ನ ಮುಖ್ಯಶಿಕ್ಷಕರು, ಧ,ರಾ,ಮ ಸರ್ಕಾರಿ ಪದವಿ ಪೂರ್ವ ಕಾಲೇಜು ಹರಿಹರ, ದಾವಣಗೆರೆ | 24-09-1999 | 24-09-2009 | 11400-21600 | 12000-22650 |

**(ಮಾನ್ಯ ಆಯುಕ್ತರಿಂದ ಕರಡು ಅನುಮೋದಿಸಲ್ಪಟ್ಟಿದೆ)**

(ಎನ್.ಬಿ ಪಾಟೀಲ್)
ಜಂಟಿ ನಿರ್ದೇಶಕರು (ಆಡಳಿತ)